# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆಸಂಖ್ಯೆ | : | 1422 |
| ಸದಸ್ಯರಹೆಸರು | : | ಶ್ರೀ ನಸೀರ್ ಅಹ್ಮದ್ |
| ಉತ್ತರಿಸುವ ದಿನಾಂಕ | : | 30.12.2022 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಮತ್ತು<br>ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ಎಷ್ಟು ಬಿ ದರ್ಜೆಯ ಹುದ್ದೆಗಳ ಅಧಿಕಾರಿಗಳಿದ್ದಾರೆ: ಈ ಹುದ್ದೆಯ ಕೆಲಸ ಸ್ವರೂಪವೇನು (ಮಾಹಿತಿನೀಡುವುದು) ಹಾಗೂ ಟಿ.ಡಿ.ಓ.ಗಳು ಕೇಂದ್ರು ಕಛೇರಿಯಲ್ಲಿ ಕೆಲಸ ಮಾಡುವ ಅವಶ್ಯಕತೆ ಇದೆಯೇ: ಅಧಿಕಾರಿಗಳ ಹೆಸರುಗಳೊಂದಿಗೆ ಮಾಹಿತಿ ನೀಡುವುದು.</td><td>ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ಒಟ್ಟು 53 ಗ್ರೂಪ್ 'ಬಿ' ದರ್ಜೆಯ ಅಧಿಕಾರಿಗಳಿದ್ದಾರೆ.<br><br>ಸದರಿ ಅಧಿಕಾರಿಗಳ ಕರ್ತವ್ಯ ಮತ್ತು ಜವಾಬ್ದಾರಿಗಳ ಕುರಿತು ಹೊರಡಿಸಿರುವ ಸುತ್ತೋಲೆ ಪ್ರತಿಯನ್ನು ಲಗತ್ತಿಸಿದೆ.<br>ನಿಗಮದ ಕೇಂದ್ರು ಕಚೇರಿಯಲ್ಲಿ ಅಧಿಕಾರಿಗಳ ಕೊರತೆ ಇರುವುದರಿಂದ ಗ್ರೂಪ್ 'ಬಿ'ದರ್ಜೆಯ ಟಿ.ಡಿ.ಓಗಳು ಕೇಂದ್ರು ಕಛೇರಿಯಲ್ಲಿ ಕರ್ತವ್ಯ ನಿರ್ವಹಣೆಯಲ್ಲಿ ಬಳಸಿಕೊಳ್ಳುವ ಅವಶ್ಯಕತೆ ಇರುತ್ತದೆ. ಕೇಂದ್ರು ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಟಿ. ಡಿ.ಓ.ಗಳ ವಿವರ ಕೆಳಗಿನಂತಿದೆ.<br><br>
<table>
<tr><th>ಕ್ರ.ಸಂ</th><th>ಅಧಿಕಾರಿಹೆಸರು</th><th>ವಿಭಾಗ</th></tr>
<tr><td>1</td><td>ಮಲ್ಲೇಶ್.ಪಿ</td><td>ಸ್ವಯಂ ಉದ್ಯೋಗ ಯೋಜನೆ (ಕಛೇರಿ ಅಧೀಕ್ಷಕರು)</td></tr>
<tr><td>2</td><td>ಮಂಜುನಾಥ.ಎ</td><td>ಸಿಬ್ಬಂದಿ ವಿಭಾಗದ ಕಛೇರಿ ಅಧೀಕ್ಷಕರು</td></tr>
<tr><td>3</td><td>ಸುಹಾಸ್.ಎಸ್</td><td>ಐ.ಟಿ ಕೋಶದ ಅಧಿಕಾರಿಗಳು</td></tr>
<tr><td>4</td><td>ಅವಿನಾಶ್.ಬಿ.ಎನ್</td><td rowspan="2">ಜಾಗೃತ ಕೋಶದ ಅಧಿಕಾರಿಗಳು</td></tr>
<tr><td>5</td><td>ವಿನೋದ್ ಕುಮಾರ್.ಹೆಚ್</td></tr>
<tr><td>6</td><td>ನವೀನ್</td><td>ಗಂಗಾ ಕಲ್ಯಾಣ ಯೋಜನೆ ವಿಭಾಗದ ಕಛೇರಿ ಅಧೀಕ್ಷಕರು</td></tr>
<tr><td>7</td><td>ಶಿವಣ್ಣ</td><td>ಸಮನ್ವಯ ಶಾಖೆಯ ಕಛೇರಿ ಅಧೀಕ್ಷಕರು</td></tr>
</table></td></tr>
<tr><td>ಆ)</td><td>ಸದರಿ ವೃಂದದವರಿಗೆ ಕರ್ತವ್ಯ ಮತ್ತು ಜವಾಬ್ದಾರಿ ನಿಗದಿಪಡಿಸಿ ದಿನಾಂಕ:30.09.2021ರಂದು ಸುತ್ತೋಲೆಯನ್ನು ಹೊರಡಿಸಲಾಗಿದೆಯೇ; ಹಾಗಿದ್ದಲ್ಲಿ ಸುತ್ತೋಲೆಯಲ್ಲಿ ಆದೇಶಿಸಿರುವಂತೆ ಎಲ್ಲಾ ಟಿ.ಡಿ.ಓ.ಗಳು ತಾಲ್ಲೂಕುಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆಯೇ ಅವರ ಕಾರ್ಯಪ್ರಗತಿಯೇನು, ಅವರುಗಳ ಕೆಲಸದ ಪ್ರಗತಿಯೇನು; (ಯಾವ್ಯಾವ ವಿವರ ನೀಡುತ್ತಿದ್ದಾರೆ ಎಂಬ ಮಾಹಿತಿ ನೀಡುವುದು) ಪ್ರತಿ ತಿಂಗಳು ದಿನಚರಿ ನಿರ್ವಹಣೆ ಮಾಡಿ ಮೇಲಧಿಕಾರಿಗಳಿಗೆ ಮಾಹಿತಿಯನ್ನು ಸಲ್ಲಿಸಿ ಸ್ವೀಕೃತಿ ಪಡೆಯಲಾಗುತ್ತಿದೆಯೇ; ಹಾಗಿದ್ದಲ್ಲಿ ಪ್ರತಿಗಳನ್ನು ಒದಗಿಸುವುದು; ಇಲ್ಲದಿದ್ದಲ್ಲಿ ಆದೇಶ ಉಲ್ಲಂಘಿಸಿರುವವರ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು;</td><td>ನಿಗಮದ ಗ್ರೂಪ್ 'ಬಿ' ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳಿಗೆ ಕರ್ತವ್ಯ ಮತ್ತು ಜವಾಬ್ದಾರಿ ನಿಗದಿಪಡಿಸಿ ದಿನಾಂಕ:30.09.2021 ರಂದು ಸುತ್ತೋಲೆ ಹೊರಡಿಸಲಾಗಿದೆ. ಜಿಲ್ಲಾ ಕಛೇರಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಟಿ.ಡಿ.ಓ.ಗಳು ನಿಗಮದ ಯೋಜನೆಗಳಡಿ ನಿಗಧಿಪಡಿಸಿರುವ ಗುರಿಗೆ ತಕ್ಕಂತೆ ಪ್ರಗತಿ ಸಾಧಿಸುವ ಬಗ್ಗೆ ನಿರಂತರ ಪ್ರಗತಿ ಪರಿಶೀಲನಾ ಸಭೆಗಳು ನಡೆಸಲಾಗುತ್ತಿದೆ. ಪ್ರವಾಸ ದಿನಚರಿ ಜಿಲ್ಲಾ ವ್ಯವಸ್ಥಾಪಕರಿಗೆ ಸಲ್ಲಿಸಲಾಗುತ್ತಿದೆ.</td></tr>
</table>

| | | |
|---|---|---|
| ಇ) | ತಾಲ್ಲೂಕು ಕಛೇರಿಗಳಲ್ಲಿ ಕೆಲಸ ಮಾಡಬೇಕಾದ ಅಧಿಕಾರಿ ವರ್ಗದವರು ಕೇಂದ್ರ ಕಛೇರಿಯಲ್ಲಿದ್ದುಕೊಂಡು ತಾಲ್ಲೂಕು ಕಛೇರಿಗಳಲ್ಲಿ ಸಾರ್ವಜನಿಕ ಸಂಪರ್ಕಕ್ಕೆ ಸಿಗದೇ ನಿಗಮದ ಯೋಜನೆಗಳ ಅನುಷ್ಠಾನ ಕುಂಟಿತಗೊಳ್ಳುತ್ತಿದ್ದು; ಇವರನ್ನು ಜಿಲ್ಲಾಕಛೇರಿಗೆ ವರ್ಗಾಯಿಸಲು ಕೈಗೊಳ್ಳುವ ಕ್ರಮಗಳೇನು; | ನಿಗಮದ ಕೇಂದ್ರ ಕಚೇರಿಯಲ್ಲಿ ಅಧಿಕಾರಿಗಳ ತೀವ್ರ ಕೊರತೆ ಇರುವುದರಿಂದ 07 ಟಿ.ಡಿ.ಓ.ಗಳನ್ನು ಕೇಂದ್ರ ಕಛೇರಿ ಸೇವೆಗೆ ಬಳಸಿಕೊಳ್ಳಲಾಗುತ್ತಿದೆ .ಉಳಿದ ಟಿ.ಡಿ.ಓ.ಗಳು ತಾಲ್ಲೂಕಿನಲ್ಲಿಯೇ ಕರ್ತವ್ಯ ನಿರ್ವಹಿಸುತ್ತಿದ್ದಾರೆ. |
| ಈ) | ಕಳೆದ ಅಧಿವೇಶನದಲ್ಲಿ ನಿಗಮದಲ್ಲಿ ಅಧಿಕಾರಿ/ಸಿಬ್ಬಂದಿಗಳ ಕೊರತೆ ಇರುವುದರಿಂದ ಗ್ರೂಪ್ ಬಿ ವೃಂದದವರಿಗೆ ನಿಗದಿಪಡಿಸಿದ ಜವಾಬ್ದಾರಿಯನ್ನು ನಿಗಮದ ಆಡಳಿತ ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದ ಕೇಂದ್ರ ಕಛೇರಿಯಲ್ಲಿ ಕೆಲಸ ನಿರ್ವಹಿಸಲು ನಿಯೋಜನೆ ಮೇರೆಗೆ ನೇಮಿಸಿಕೊಳ್ಳಲಾಗಿದೆ ಎಂದು ತಪ್ಪು ಮಾಹಿತಿಯನ್ನು ನೀಡಿರುವುದು ನಿಜವೇ; ಇಲ್ಲದಿದ್ದಲ್ಲಿ ನಿಗಮದ ಆದೇಶ ದಿನಾಂಕ:21.06.2022 ಆದೇಶದಲ್ಲಿ ಕೆಲವರನ್ನು ಕೇಂದ್ರ ಕಛೇರಿಗೆ ವರ್ಗಾವಣೆ ಮಾಡಿಕೊಂಡಿರುವುದು ನಿಜವೇ: | ಕಳೆದ ಅಧಿವೇಶನದಲ್ಲಿ ನಿಗಮದಲ್ಲಿ ಅಧಿಕಾರಿ/ಸಿಬ್ಬಂದಿಗಳ ಕೊರತೆ ಇರುವುದರಿಂದ ಗ್ರೂಪ್ ಬಿ ವೃಂದದವರಿಗೆ ನಿಗದಿಪಡಿಸಿದ ಜವಾಬ್ದಾರಿಯನ್ನು ನಿಗಮದ ಆಡಳಿತ ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದ ಕೇಂದ್ರ ಕಛೇರಿಯಲ್ಲಿ ಕೆಲಸ ನಿರ್ವಹಿಸಲು ನಿಯೋಜನೆ ಮೇರೆಗೆ ನೇಮಿಸಿಕೊಳ್ಳಲಾಗಿದೆ ಎಂದು ಉತ್ತರ ನೀಡಲಾಗಿದೆ.<br>ಸದನಕ್ಕೆ ಯಾವುದೇ ತಪ್ಪು ಮಾಹಿತಿಯನ್ನು ನೀಡಿರುವುದಿಲ್ಲ.<br>ಈ ಕಾರ್ಯಾಲಯದ ಆದೇಶ ದಿನಾಂಕ:21.06.2022ರಲ್ಲಿ ಸದರಿ ನಿಯೋಜನೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಗ್ರೂಪ್ 'ಬಿ' ವೃಂದದ ಅಧಿಕಾರಿಗಳ ಸೇವೆಯನ್ನು ಅಧಿಕೃತವಾಗಿ ಕೇಂದ್ರ ಕಛೇರಿಗೆ 2022-23ನೇ ಸಾಲಿನಲ್ಲಿ ವರ್ಗಾವಣೆ ಮಾಡಲಾಗಿರುತ್ತದೆ. |
| ಉ) | ಕಡ್ಡಾಯವಾಗಿ ತಾಲ್ಲೂಕಿನಲ್ಲಿ ಕೆಲಸ ಮಾಡಬೇಕಾದವರನ್ನು ಅನಗತ್ಯವಾಗಿ ಕೇಂದ್ರ ಕಛೇರಿಗಳಿಗೆ ವರ್ಗಾವಣೆ ಮಾಡಿರುವುದನ್ನು ರದ್ದುಗೊಳಿಸಿ ಇವರುಗಳನ್ನು ಜಿಲ್ಲಾ ಕಛೇರಿಗಳಿಗೆ ವರ್ಗಾಯಿಲು ಕೈಗೊಳ್ಳುವ ಕ್ರಮಗಳೇನು? (ವಿವರ ನೀಡುವುದು) | ಆಡಳಿತಾತ್ಮಕ ಹಿತದೃಷ್ಟಿಯಿಂದ 07 ಟಿ. ಡಿ. ಓ.ಗಳನ್ನು ಕೇಂದ್ರ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸಲು ಆದೇಶಿಸಿಕೊಳ್ಳಲಾಗಿದೆ, ಸದರಿ ಹುದ್ದೆಗಳಿಗೆ ಅಧಿಕಾರಿ/ ನೌಕರರ ನೇಮಕವಾದ ನಂತರ ಅವರನ್ನು ಮೂಲ ಸ್ಥಾನಕ್ಕೆ ವರ್ಗಾಯಿಸಲಾಗುವುದು. |

**ಸಂಖ್ಯೆ:ಸಕಇ 621 ಎಸ್ ಡಿಸಿ 2022**

**(ಕೋಟಾ ಶ್ರೀನಿವಾಸ ಪೂಜಾರಿ)**
ಸಮಾಜ ಕಲ್ಯಾಣ ಮತ್ತು
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು